## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವುದು – ಆದೇಶ.

******

**ಓದಲಾಗಿದೆ:**

1) ಸರ್ಕಾರದ ಆದೇಶ ಕ್ರಮ ಸಂಖ್ಯೆ: ಗ್ರಾಅಪ 326 ಜಿಪಸ 93, ದಿನಾಂಕ: 09-07-1993.
2) ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರವರ ಪತ್ರ ಕ್ರಮ ಸಂಖ್ಯೆ: ರಾಚುಆ/9/ಸಿಬ್ಬಂದಿ/2004, ದಿನಾಂಕ: 16-05-2012.
3) ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರವರ ಪತ್ರ ಕ್ರಮ ಸಂಖ್ಯೆ: ರಾಚುಆ/13/ಸಿಬ್ಬಂದಿ/2012, ದಿನಾಂಕ: 18-06-2012.
4) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಸಿಆಸುಇ 06 ಅಕಾಅ 2012, ದಿನಾಂಕ: 04-07-2012.

**ಪ್ರಸ್ತಾವನೆ:**

ರಾಜ್ಯ ಚುನಾವಣಾ ಆಯೋಗವು ಸಂವಿಧಾನಾತ್ಮಕವಾಗಿ ರಚಿತವಾದ ಸಂಸ್ಥೆಯಾಗಿದ್ದು, ರಾಜ್ಯದ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿರುತ್ತದೆ. ರಾಜ್ಯ ಮಟ್ಟದಲ್ಲಿ ಇಂತಹ ಬೃಹತ್ ಮಟ್ಟದ ಕೆಲಸವನ್ನು ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 09-07-1993ರ ಆದೇಶದಲ್ಲಿ ಮಂಜೂರಾದ ಸೀಮಿತ ಸಿಬ್ಬಂದಿ ವರ್ಗದ ಸಹಾಯದಿಂದ ಇಲ್ಲಿಯವರೆವಿಗೂ ಕಾರ್ಯನಿರ್ವಹಿಸುತ್ತಿದೆ.

ರಾಜ್ಯ ಚುನಾವಣಾ ಆಯೋಗವು ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ ಓದಲಾದ ಪತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ 20 ವರ್ಷದ ಹಿಂದಿನ Staffing Pattern ಪ್ರಕಾರ ಹುದ್ದೆಗಳು ಮಂಜೂರಾಗಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣಾ ಕಾರ್ಯಭಾರಗಳು ಅತಿ ಹೆಚ್ಚಾಗಿರುವುದರಿಂದ ಆಯೋಗದ ಸಿಬ್ಬಂದಿ ವರ್ಗದ ರೂಪುರೇಷೆಗಳನ್ನು ಚುನಾವಣೆಯ ಹಾಗೂ ಆಡಳಿತದ ಹಿತದೃಷ್ಟಿಯಿಂದ ಪುನರ್ ರಚಿಸುವುದು ಅಗತ್ಯವಾಗಿರುವುದರಿಂದ ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚುವರಿಯಾಗಿ ಈ ಕೆಳಕಂಡಂತೆ ಒಟ್ಟು 12 ಹುದ್ದೆಗಳನ್ನು ಸೃಜಿಸಲು ಪ್ರಸ್ತಾವಿಸಿದೆ.

**ನ್ಯಾಯಾಲಯದ ಪ್ರಕರಣಗಳ ಸಲುವಾಗಿ**

| ಕ್ರ.ಸಂ | ಹುದ್ದೆಯ ವಿವರ | ಹುದ್ದೆ ಸಂಖ್ಯೆ |
|---|---|---|
| 1 | ಕೋರ್ಟ್ ಆಫೀಸರ್ ಕಂ.ಲೀಗಲ್ ಅಡ್ವೈಸರ್ | 1 |
| 2 | ಶಾಖಾಧಿಕಾರಿ | 1 |
| 3 | ಶೀಘ್ರಲಿಪಿಗಾರರು (ಇಂಗ್ಲೀಷ್ ಮತ್ತು ಕನ್ನಡ ಶೀಘ್ರಲಿಪಿ ಪರಿಣಿತರು) | 1 |
| 4 | ಬೆರಳಚ್ಚುಗಾರರು (ಇಂಗ್ಲೀಷ್ ಮತ್ತು ಕನ್ನಡ) | 1 |
| 5 | ಸೀನಿಯರ್ ಪ್ರೋಗ್ರಾಮರ್ ಉಪ ನಿರ್ದೇಶಕರು ಅಂಕಿ ಅಂಶಗಳ ಇಲಾಖೆ ದರ್ಜೆಯ ಅಧಿಕಾರಿ | 1 |

**ಆಡಳಿತ ವಿಭಾಗಕ್ಕೆ ಹೆಚ್ಚುವರಿ ಹುದ್ದೆಗಳು**

| ಕ್ರ.ಸಂ. | ಹೆಚ್ಚುವರಿಯಾಗಿ ಸೃಜಿಸಲು ಪ್ರಸ್ತಾಪಿಸಿದ ಹುದ್ದೆಯ ವಿವರ | ಹುದ್ದೆ ಸಂಖ್ಯೆ | ಹೆಚ್ಚುವರಿ ಹುದ್ದೆಗೆ ಬೇಡಿಕೆ ಸಲ್ಲಿಸಿದ್ದಕ್ಕೆ ಕಾರಣಗಳು ಹಾಗೂ ನಿರ್ವಹಿಸಬೇಕಾದ ಹೊಸ ಜವಾಬ್ದಾರಿಗಳು ನಿರ್ವಹಣೆ ಮಡುವ ಕರ್ತವ್ಯಗಳು | ನೇಮಕಾತಿ ವಿವರ |
|---|---|---|---|---|
| 1 | ಅಧೀನ ಕಾರ್ಯದರ್ಶಿ | 1 | ಆಯುಕ್ತರ ಆಪ್ತ ಶಾಖೆ ಹಾಗೂ ನ್ಯಾಯಾಲಯಗಳ ವಿಷಯ ಹಾಗೂ ಅಂತರ ರಾಜ್ಯಗಳ ವಿಷಯ ಸಮ್ಮೇಳನ ಇತ್ಯಾದಿ | ಸಚಿವಾಲಯದಿಂದ ಅಥವಾ ಕಂದಾಯ ಇಲಾಖೆಯಿಂದ ನಿಯೋಜನೆ |

| | | | | |
|---|---|---|---|---|
| 2 | ಶಾಖಾಧಿಕಾರಿ | 1 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣೆ ಶಾಖೆ | ಸಚಿವಾಲಯದಿಂದ ಅಥವಾ ಕಂದಾಯ ಇಲಾಖೆಯಿಂದ ನಿಯೋಜನೆ |
| 3 | ಹಿರಿಯ ಸಹಾಯಕರು | 1 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣೆ ಶಾಖೆ | –"– |
| 4 | ಸಹಾಯಕರು | 1 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣೆ ಶಾಖೆ | –"– |
| 5 | ಬೆರಳಚ್ಚುಗಾರರು | 1 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣೆ ಶಾಖೆ | –"– |
| 6 | ಗ್ರೂಪ್ 'ಡಿ' | 1 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣೆ ಶಾಖೆ | ಹೊರಗುತ್ತಿಗೆ |
| 7 | ವಾಹನ ಚಾಲಕರು | 1 | ಪೂಲ್ ವಾಹನಕ್ಕೆ | ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮಂಜೂರಾತಿ |
| | ಒಟ್ಟು | 7 | | |

ಕ್ರಮ ಸಂಖ್ಯೆ (4) ರಲ್ಲಿ ಓದಲಾದಂತೆ ಅನಧಿಕೃತ ಟಿಪ್ಪಣಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಹ ರಾಜ್ಯ ಚುನಾವಣಾ ಆಯೋಗದ ಕಾರ್ಯಾಧ್ಯಯನ ವರದಿಯಲ್ಲಿ ಆಯೋಗದ ಹೆಚ್ಚುವರಿ ಕಾರ್ಯ/ಕರ್ತವ್ಯಗಳ ನಿರ್ವಹಣೆಗಾಗಿ ವಿವಿಧ ದರ್ಜೆಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಿ ಅವುಗಳನ್ನು ಬೇರೆ ಇಲಾಖೆಗಳಿಂದ ನಿಯೋಜನೆ ಮೇಲೆ ಭರ್ತಿ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ರಾಜ್ಯ ಚುನಾವಣಾ ಆಯೋಗಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನು ಸೃಜಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 187 ಜಿಪಸ 2011**
**ಬೆಂಗಳೂರು, ದಿನಾಂಕ: 23-07-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಚುನಾವಣಾ ಆಯೋಗದಲ್ಲಿ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸುವ ಸಲುವಾಗಿ ಈ ಕೆಳಕಂಡ 5 ಹುದ್ದೆಗಳ ಸೃಜನೆಗೆ ಹಾಗು ಸದರಿ ಹುದ್ದೆಗಳ ಮುಂದೆ ತಿಳಿಸಿರುವಂತೆ ನೇಮಕಾತಿ ವಿಧಾನದಿಂದ ಭರ್ತಿ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರ ಸಂ. | ಹುದ್ದೆಯ ವಿವರ | ಹುದ್ದೆಯ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಕೋರ್ಟ್ ಆಫೀಸರ್ ಕಂ-ಲೀಗಲ್ ಅಡ್ವೈಸರ್ (ಗ್ರೂಪ್-ಎ ಕಿರಿಯ ಶ್ರೇಣಿ) | 1 | ನ್ಯಾಯಾಂಗ ಇಲಾಖೆಯಿಂದ ನಿಯೋಜನೆ/ ನ್ಯಾಯಾಂಗ ಇಲಾಖೆಯಿಂದ ನಿಯೋಜನೆ ಮೇರೆಗೆ ಲಭ್ಯವಾಗದೇ ಇದ್ದಲ್ಲಿ ಎಲ್.ಎಲ್.ಬಿ. ಅರ್ಹತೆವುಳ್ಳವರನ್ನು ಹೊರಗುತ್ತಿಗೆ ಆಧಾರದ ಮೇರೆಗೆ. |
| 2 | ಶಾಖಾಧಿಕಾರಿ (ಲಾ ಅಸಿಸ್ಟೆಂಟ್) (ಗ್ರೂಪ್-ಬಿ) | 1 | ನ್ಯಾಯಾಂಗ ಇಲಾಖೆಯಿಂದ ನಿಯೋಜನೆ/ ನ್ಯಾಯಾಂಗ ಇಲಾಖೆಯಿಂದ ನಿಯೋಜನೆ ಮೇರೆಗೆ ಲಭ್ಯವಾಗದೇ ಇದ್ದಲ್ಲಿ ಎಲ್.ಎಲ್.ಬಿ. ಅರ್ಹತೆವುಳ್ಳವರನ್ನು ಹೊರಗುತ್ತಿಗೆ ಆಧಾರದ ಮೇರೆಗೆ. |
| 3 | ಶೀಘ್ರಲಿಪಿಗಾರರು (ಇಂಗ್ಲೀಷ್ ಮತ್ತು ಕನ್ನಡ ಪರಿಣಿತರು) | 1 | ನ್ಯಾಯಾಂಗ ಇಲಾಖೆಯಿಂದ ನಿಯೋಜನೆ/ ಹೊರಗುತ್ತಿಗೆ. |
| 4 | ಬೆರಳಚ್ಚುಗಾರರು | 1 | ನ್ಯಾಯಾಂಗ ಇಲಾಖೆಯಿಂದ ನಿಯೋಜನೆ / ಹೊರಗುತ್ತಿಗೆ |
| 5 | ಸೀನಿಯರ್ ಪ್ರೋಗ್ರಾಮರ್ (ಉಪ ನಿರ್ದೇಶಕರು, ಅಂಕಿ ಅಂಶಗಳ ಇಲಾಖೆ) | 1 | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ನಿಯೋಜನೆ |
| | ಒಟ್ಟು | 5 | |

ಮುಂದುವರೆದು, ರಾಜ್ಯ ಚುನಾವಣಾ ಆಯೋಗದವರು ಕೋರಿರುವ ಹೆಚ್ಚುವರಿ 7 ಹುದ್ದೆಗಳನ್ನು ಪ್ರಸ್ತುತ ಆಯೋಗದಲ್ಲಿರುವ ಸಿಬ್ಬಂದಿಯ ಮರುಪದನಾಮೀಕರಣ (re-designation) ಅಥವಾ ಈಗಿರುವ ಸಿಬ್ಬಂದಿಗೆ ಹೆಚ್ಚುವರಿ ಜವಾಬ್ದಾರಿಯನ್ನು ನೀಡುವ ಮೂಲಕ ನಿರ್ವಹಿಸುವುದು.

ಸದರಿ ವೆಚ್ಚವನ್ನು 13ನೇ ಹಣಕಾಸು ಆಯೋಗದ ಅನುದಾನದಿಂದ ಅಥವಾ ರಾಜೀವ್‌ಗಾಂಧಿ ಪಂಚಾಯತ್ ಸಶಕ್ತೀಕರಣ್ ಅಭಿಯಾನ್ ಯೋಜನೆ (ಆರ್.ಜಿ.ಪಿ.ಎಸ್.ಎ.) ಯಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 307:ವೆಚ್ಚ–6/2012, ದಿನಾಂಕ: 07–07–2012 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ರಾಧಾಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1) ಮಹಾಲೇಖಪಾಲರು, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
3) ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಆಯುಕ್ತರು, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ, ಮಹಾ ಮಂಡಳಿ ಕಟ್ಟಡ (ಹಿಂಭಾಗ), ನಂ. 8, 1ನೇ ಮಹಡಿ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560 052.
5) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–6), ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು–ಕಾರ್ಯಾಧ್ಯಾಯನ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ – ಮಾಹಿತಿಗಾಗಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ನಿರ್ದೇಶಕರು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು.